ಸದರಿ ನೀರಿನ ಮೂಲದ ಗುಣ ಮಟ್ಟವನ್ನು ಪುನ: ದಿನಾಂಕ 12-02-2001 ರಲ್ಲಿ ಮೈಸೂರಿನ ಎಸ್.ಜೆ.ಸಿ.ಇ ಹಾಗೂ ಎನ್.ಐ.ಇ ಗಳಿಂದ ಪರೀಕ್ಷಿಸಲಾಗಿದ್ದು, ನೀರು ಕುಡಿಯಲು ಯೋಗ್ಯವಾಗಿದೆಯೆಂದು ದೃಢೀಕರಿಸಲ್ಪಟ್ಟಿದೆ. ಆದಾಗ್ಯೂ ಗ್ರಾಮಸ್ಥರು ಸದರಿ ಯೋಜನೆಯನ್ನು ನಿರ್ವಹಿಸುತ್ತಿರುವುದಿಲ್ಲ.

4. ಹೌದು, ಹೊಸದಾಗಿ ಬೋರ್‌ವೆಲ್ ಕೊರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

5. ಜುಲೈ-2002 ರ ಅಂತ್ಯದೊಳಗೆ ಹೊಸ ಬೋರ್‌ವೆಲ್ ಕೊರೆಯಲು ಪ್ರಸ್ತಾಪಿಸಲಾಗಿದೆ ಮತ್ತು ಕ್ರಮ ಕೈಗೊಳ್ಳಲಾಗಿದೆ.

ಧಾರವಾಡದ ಸರ್ಕಾರಿ ಶಾಲೆಗಳಲ್ಲಿರುವ ಕೊರತೆಗಳು

444 (907) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಧಾರವಾಡವನ್ನು ಉತ್ತರ ಕರ್ನಾಟಕ ಪ್ರಮುಖ ಶಿಕ್ಷಣ ಕೇಂದ್ರವೆಂದು ಸರ್ಕಾರ ಗುರ್ತಿಸಿದೆಯೇ? ಹಾಗಾದರೆ ಧಾರವಾಡದಲ್ಲಿ ಎಷ್ಟು ಸರ್ಕಾರಿ ಪ್ರೌಢಶಾಲೆಗಳು ಇವೆ. ಹಾಗೂ ಖಾಸಗಿ ಶಾಲೆಗಳು ಎಷ್ಟು ಅವುಗಳ ಹೆಸರು ವಿವರ ನೀಡುವುದು.

2. ಸದರಿ ಸರ್ಕಾರಿ ಪ್ರೌಢ ಶಾಲೆ ಹಾಗೂ ಖಾಸಗಿ ಪ್ರೌಢ ಶಾಲೆಗಳ ಮೂರು ವರ್ಷಗಳ ಎಸ್.ಎಸ್.ಎಲ್.ಸಿ ಪರೀಕ್ಷಾ ಪರಿಣಾಮಗಳ ಬಗ್ಗೆ ವಿವರವಾದ ಮಾಹಿತಿ ನೀಡುವುದು;

3. ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಇರುವ ಕೊರತೆಗಳೇನು? ಶಾಲಾವಾರು ಮಾಹಿತಿ ನೀಡುವುದು;

ಪ್ರೊ.ಬಿ.ಕೆ. ಚಂದ್ರಶೇಖರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

1. ಧಾರವಾಡವು ಒಂದು ಪ್ರಮುಖ ಶಿಕ್ಷಣ ಕೇಂದ್ರವಾಗಿದೆ. ಧಾರವಾಡದಲ್ಲಿರುವ ಪ್ರೌಢಶಾಲೆಗಳ ಕೆಳಕಂಡಂತಿವೆ:-

ಸರ್ಕಾರಿ ಪ್ರೌಢ ಶಾಲೆಗಳು	-	2
ಖಾಸಗಿ ಅನುದಾನಿತ ಪ್ರೌಢಶಾಲೆಗಳು	-	20
ಖಾಸಗಿ ಅನುದಾನರಹಿತ ಪ್ರೌಢಶಾಲೆಗಳು	-	10

(ಪಟ್ಟಿ ಲಗತ್ತಿಸಿದೆ)

2. ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

3. ಎಲ್ಲಾ ಹುದ್ದೆಗಳನ್ನು ತುಂಬಲಾಗಿರುವುದರಿಂದ ಕೊರತೆಗಳೇನು ಇರುವುದಿಲ್ಲ.

ಧಾರವಾಡದಲ್ಲಿರುವ ಪ್ರೌಢಶಾಲೆಗಳ ವಿವರ

ಸರ್ಕಾರಿ ಪ್ರೌಢಶಾಲೆಗಳು

1. ಸರ್ಕಾರಿ ಪ್ರೌಢ ಶಾಲೆ, ಧಾರವಾಡ.

2. ಸರ್ಕಾರಿ ಉರ್ದು ಪ್ರೌಢ ಶಾಲೆ, ಗುಲಗಂಜಿ ಕೊಪ್ಪ

ಅನುದಾನಿತ ಪ್ರೌಢಶಾಲೆಗಳು	ಮಾಧ್ಯಮ
1) ಗಾಂಧಿ ಹಿಂದಿ ಪ್ರೌಢಶಾಲೆ, ಧಾರವಾಡ	ಹಿಂದಿ
2) ಅಂಜುಮಾನ ಪ್ರೌಢಶಾಲೆ, ಧಾರವಾಡ	ಉರ್ದು
3) ಪ್ರೆಸೇಂಟೇಷನ್ ಬಾಲಕಿಯರ ಪ್ರೌಢಶಾಲೆ, ಧಾರವಾಡ	ಕನ್ನಡ
4) ಬಿ.ಎಂ.ಬಾಲಕಿಯರ ಪ್ರೌಢಶಾಲೆ, ಧಾರವಾಡ	ಕನ್ನಡ ಮತ್ತು ಇಂಗ್ಲೀಷ್
5) ಆದರ್ಶ ಬಾಲಿಕಾ ಪ್ರೌಢಶಾಲೆ, ಧಾರವಾಡ	ಕನ್ನಡ
6) ಭಾರತ್ ಪ್ರೌಢಶಾಲೆ., ಧಾರವಾಡ	ಕನ್ನಡ
7) ಅಲೂರು ವೆಂಕಟರಾವ್ ಪ್ರೌಢಶಾಲೆ, ಧಾರವಾಡ	ಕನ್ನಡ
8) ಶಾರದಾ ಬಾಲಕಿಯರ ಪ್ರೌಢಶಾಲೆ, ಧಾರವಾಡ	ಕನ್ನಡ
9) ವನಿತಾ ಪ್ರೌಢಶಾಲೆ, ಧಾರವಾಡ	ಕನ್ನಡ
10) ವಿದ್ಯಾರಣ್ಯ ಸಂ.ಪ.ಪೂ.ಕಾಲೇಜು, ಧಾರವಾಡ	ಕನ್ನಡ
11) ಜಯದೇವಿತಾಯಿ ಪ್ರೌಢಶಾಲೆ, ಧಾರವಾಡ	ಕನ್ನಡ
12) ಬುದ್ದರಕ್ಕಥ ಪ್ರೌಢಶಾಲೆ, ಧಾರವಾಡ	ಕನ್ನಡ
13) ನ್ಯೂ ಹೈಸ್ಕೂಲ್, ಧಾರವಾಡ	ಕನ್ನಡ
14) ಕರ್ನಾಟಕ ಪ್ರೌಢಶಾಲೆ, ಧಾರವಾಡ	ಕನ್ನಡ
15) ಕೆ.ಇ.ಬಿ. ಪ್ರೌಢಶಾಲೆ, ಧಾರವಾಡ (ಪದವಿ ಪೂರ್ವ)	ಕನ್ನಡ
16) ಮೃತ್ಯುಂಜಯ ಪ್ರೌಢಶಾಲೆ, ಧಾರವಾಡ	ಕನ್ನಡ
17) ಕೆ.ಎನ್.ಕೆ. ಪ್ರೌಢಶಾಲೆ, ಧಾರವಾಡ	ಕನ್ನಡ
18) ಆರ್.ಎಲ್.ಎಸ್.ಸಂ.ಪ.ಪೂ.ಕಾಲೇಜು, ಧಾರವಾಡ	ಕನ್ನಡ
19) ಬಿ.ಎಂ. ಬಾಲಕಿಯರ ಪ್ರೌಢಶಾಲೆ, ಧಾರವಾಡ	ಕನ್ನಡ
20) ಸೆಂಟ್ ಜೋಸೆಫ್ ಪ್ರೌಢಶಾಲೆ, ಧಾರವಾಡ	ಕನ್ನಡ
ಅನುದಾನರಹಿತ ಪ್ರೌಢಶಾಲೆಗಳು	
1) ತುಳಜಾಭವಾನಿ ಪ್ರೌಢಶಾಲೆ	ಕನ್ನಡ
2) ಹೊನ್ನಮ್ಮ ಶಿಕ್ಷಣ ಸಂಸ್ಥಾ ಡೆಫ್ ಚೈಲ್ಡ್ ಸ್ಕೂಲ್	ಕನ್ನಡ
3) ಮಹಾಂತೇಶ ಪ್ರೌಢಶಾಲೆ, ಕಮಲಾಪುರ, ಧಾರವಾಡ	ಕನ್ನಡ
4) ಕೆ.ಎ.ಎಸ್.ಕನ್ನಡ ಪ್ರೌಢಶಾಲೆ, ಧಾರವಾಡ	ಕನ್ನಡ
5) ಮಲ್ಲನಜ್ಜಣ್ಣ ಪ್ರೌಢಶಾಲೆ, ಧಾರವಾಡ	ಕನ್ನಡ

6) ಸದನಕೇರಿ ಎಜುಕೇಷನ್ ಸೊಸೈಟಿ ಪ್ರೌಢಶಾಲೆ, ಧಾರವಾಡ ಕನ್ನಡ

7) ಮಾರುತಿ ಪ್ರೌಢಶಾಲೆ, ಧಾರವಾಡ ಕನ್ನಡ

8) ಚನ್ನಬಸವೇಶ್ವರ ಪ್ರೌಢಶಾಲೆ, ಧಾರವಾಡ ಕನ್ನಡ

9) ಹಜರತ್ ನಿಜಾಮುದ್ದಿನ್ ಪ್ರೌಢಶಾಲೆ, ಧಾರವಾಡ ಕನ್ನಡ

10) ಸರಸಗಂಗ ಪ್ರೌಢಶಾಲೆ, ವಿದ್ಯಾಗಿರಿ, ಧಾರವಾಡ ಕನ್ನಡ

ಧಾರವಾಡದಲ್ಲಿರುವ ಶಾಲೆಗಳ ವಿವರ

445 (908) ಶ್ರೀ ಬಿಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಧಾರವಾಡದಲ್ಲಿರುವ ಪ್ರೌಢಶಾಲೆಗಳು ಎಷ್ಟು ; ಅವುಗಳಲ್ಲಿ ಸರ್ಕಾರದ ಮತ್ತು ಖಾಸಗಿ ಪ್ರೌಢ ಶಾಲೆಗಳ ವಿವರ ಪ್ರತ್ಯೇಕವಾಗಿ ನೀಡುವುದು;

2. ಧಾರವಾಡ ನಗರದಲ್ಲಿ ಕಳೆದ ಮೂರು ವರ್ಷದಲ್ಲಿ ಎಷ್ಟು ಕನ್ನಡ ಮಾಧ್ಯಮ ಪ್ರೌಢ ಶಾಲೆಗಳಿಗೆ ಅನುಮತಿ ನೀಡಲಾಗಿದೆ; ಇಲ್ಲದಿದ್ದಲ್ಲಿ ನೀಡದಿರಲು ಕಾರಣಗಳೇನು?

3. ಧಾರವಾಡ ಶಹರದಲ್ಲಿ ಬಡಜನತೆಯ ಮಧ್ಯಮ ವರ್ಗದ ಮಕ್ಕಳಿಗೆ ಸರ್ಕಾರಿ ಕನ್ನಡ ಪ್ರೌಢ ಶಾಲೆಯ ಬೇಡಿಕೆ ಎಷ್ಟು ಇದೆ ತಿಳಿಸುವುದು.

ಪ್ರೊ.ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

1. 32

ಸರ್ಕಾರಿ ಪ್ರೌಢಶಾಲೆಗಳು	-	02
ಅನುದಾನಿತ ಪ್ರೌಢಶಾಲೆಗಳು	-	20
ಅನುದಾನರಹಿತ ಖಾಸಗಿ	-	10

ಪ್ರೌಢ ಶಾಲೆಗಳು (ಪಟ್ಟಿ ಲಗತ್ತಿಸಿದೆ)

2. ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಹಾಗೂ ಖಾಸಗೀ ಪ್ರೌಢಶಾಲೆಗಳನ್ನು ಮಂಜೂರು ಮಾಡಿರುವುದಿಲ್ಲ. ಶೈಕ್ಷಣಿಕ ಅಗತ್ಯತೆ ಹಾಗೂ ಅಯವ್ಯಯದ ಲಭ್ಯತೆಗೆ ಅನುಗುಣವಾಗಿ ಶಾಲೆಗಳನ್ನು ಮಂಜೂರು ಮಾಡಲಾಗುತ್ತದೆ.

3. ಪ್ರಸ್ತಾವನೆ ಬಂದಿರುವುದಿಲ್ಲ.

ಯು.ಕೆ.ಪಿ. ಮುಳುಗಡೆ ಸಂತ್ರಸ್ತರಿಗೆ ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳ ಮಂಜೂರಾತಿ

446 (765) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?